ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸೆಷನ್ಸ್ ಕೇಸ್ ನಂಬರ್ : 252/2022**

**ಫ್ರಾಸಾ-9 ಚಾಸಾ- 13**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಲೋಕೇಶ |
| ತಂದೆಯ ಹೆಸರುಃ | : | ಗೋವಿಂದರಾಜು |
| ವಯಸ್ಸುಃ | : | 40 ವರ್ಷ |
| ಉದ್ಯೋಗಃ | : | ಆಟೋಚಾಲಕ |
| ವಾಸ | : | ಆಲೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ:09-07-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯವಿಲ್ಲ. 2022ರ ಜೂನ್ ತಿಂಗಳಿನಲ್ಲಿ ಆಲೂರು ಪೊಲೀಸ್ ಠಾಣೆಗೆ ನಾನು ಹೋಗಿದ್ದೆನು. ಅಲ್ಲಿ ಪೊಲೀಸರು ಆರೋಪಿಗೆ ಸಂಬಂಧಿಸಿದ ಟೀಶರ್ಟನ್ನು ವಶಪಡಿಸಿಕೊಂಡದ್ದು ನನಗೆ ಗೊತ್ತಿಲ್ಲ, ಆದರೆ ಫೋಟೋ ತೆಗೆಸಿ ಸಹಿ ಪಡೆದಿರುತ್ತಾರೆ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಸದರಿ ದಾಖಲೆಯನ್ನು ನಿಪಿ-11 ಎಂದು ಸಾಕ್ಷಿಯ ರುಜುವನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. (ಮಾನ್ಯ ಸರ್ಕಾರಿ ಅಭಿಯೋಜಕರು ಸೀಲಾದ ಕವರನ್ನು ತೆರೆಯಲು ಅನುಮತಿ ಕೋರಿದ್ದು ಅನುಮತಿ ನೀಡಿದೆ) ಸೀಲಾದ ಕವರನ್ನು ತೆರೆದು ಅದರಲ್ಲಿದ್ದ ಒಂದು ಟೀಶರ್ಟನ್ನು ತೋರಿಸಿದಾಗ ಸಾಕ್ಷಿಯು ಅದನ್ನು ತಾನು ಈ ಹಿಂದೆ ನೋಡಿಲ್ಲ ಮತ್ತು ಅದನ್ನು ತನ್ನ ಸಮಕ್ಷಮ ವಶಪಡಿಸಿಕೊಂಡಿಲ್ಲ ಎನ್ನುತ್ತಾರೆ. ಗುರುತಿಸುವಿಕೆಗಾಗಿ ಅದನ್ನು ಎಂ.ಒ.1 ಎಂದು ಗುರುತಿಸಲಾಯಿತು. ಈಗ ತೋರಿಸಿದ 2 ಫೋಟೋಗಳಲ್ಲಿ ನಾನು ಇದ್ದೇನೆ. ಸದರಿ ಫೋಟೋಗಳನ್ನು ನಿಪಿ-12 ಮತ್ತು 13 ಎಂದು ಗುರುತಿಸಲಾಯಿತು. ಈ ಫೋಟೋಗಳಲ್ಲಿ

ಈ ದಿವಸ ನ್ಯಾಯಾಲಯದ ಮುಂದಿರುವ ಆರೋಪಿತರೂ ಕೂಡ ಇದ್ದಾರೆ ಎಂದರೆಸ ಾಕ್ಷಿಯು ನಾನು ಆ ದಿವಸ ಅವರನ್ನು ಗಮನಿಸಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಹೇಳಿಕೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ಅಭಿಯೋಜಕರಿಂದಃ**

ದಿಃ9-6-2022ರಂದು ಪೊಲೀಸರು ನನ್ನನ್ನು ಆಲೂರು ಪಿ ಎಸ್ ಗೆ ಕರೆಸಿದಾಗ ಅಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ಕೂಡ ಹಾಜರಿದ್ದರು ಎಂದರೆ ನನಗೆ ಸರಿಯಾಗಿ ಗೊತ್ತಾಗಲಿಲ್ಲ. ಅಲ್ಲಿ ಆರೋಪಿ ತಾನು ಕೃತ್ಯ ಮಾಡುವಾಗ ಧರಿಸಿದ್ದ ಟೀಶರ್ಟ್ ಎಂದು ಎಂ.ಒ.1ನ್ನು ಹಾಜರುಪಡಿಸಿದ್ದನ್ನು ನನ್ನ ಸಮಕ್ಷಮ ಪೊಲೀಸರು ವಶಪಡಿಸಿಕೊಂಡು ನಿಪಿ-11ರಂತೆ ಮಹಜರು ಮಾಡಿ ನಿಪಿ-12 ಮತ್ತು 13 ರಂತೆ ಫೋಟೋ ತೆಗೆದದ್ದು ಎಂದರೆ ಸಾಕ್ಷಿಯು ಸಹಿ ಹಾಕಲು ಹೇಳಿದ ಕಾರಣ ಸಹಿ ಹಾಕಿರುತ್ತೇನೆ ಎನ್ನುತ್ತಾರೆ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

ಇಲ್ಲ ಎಂದು ಹೇಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಹಾಸನ.**